# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 320 (205)
ಸದಸ್ಯರ ಹೆಸರು : ಡಾ: ತೇಜಸ್ವಿನಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು
ಉತ್ತರಿಸುವ ದಿನಾಂಕ : 14.12.2021.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | 2014ರಿಂದ ಈವರೆಗೆ ರಾಜ್ಯದಲ್ಲಿ ಸ್ಥಾಪನೆಯಾಗಿರುವ ಬೃಹತ್ ಹಾಗೂ ಮಧ್ಯಮ ಕೈಗಾರಿಕೆಗಳೆಷ್ಟು; ವಹಿವಾಟು ಹಾಗೂ ನೌಕರರೆಷ್ಟು; ಇದರಲ್ಲಿ ಸರ್ಕಾರಿ ಉದ್ದಿಮೆಗಳ ಸಂಖ್ಯೆ ಎಷ್ಟು; ಖಾಸಗಿ ಉದ್ದಿಮೆಗಳೆಷ್ಟು; | 2014 ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು 288 ಸ್ಥಾಪನೆಯಾಗಿದ್ದು ಈ ಕೈಗಾರಿಕೆಗಳ ವಹಿವಾಟು ರೂ. 399,498 ಕೋಟಿಗಳು ಇದ್ದು, 1,79,130 ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಈ 288 ಕೈಗಾರಿಕೆಗಳು ಖಾಸಗಿ ಉದ್ದಿಮೆಗಳಾಗಿದ್ದು, ಸರ್ಕಾರಿ ಉದ್ದಿಮೆಗಳು ಯಾವುದು ಇರುವುದಿಲ್ಲ. |
| ಆ | ವಾಯು ಮಾಲಿನ್ಯ ತಡೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಉತ್ತಮ ಪರಿಸರ ಸೃಷ್ಟಿಗೆ ನೀಡುತ್ತಿರುವ ಕೊಡುಗೆಗಳೇನು; | ಕರ್ನಾಟಕ ರಾಜ್ಯ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸಲ್ಲಿಸಿರುವ ಮಾಹಿತಿಯನ್ನು **ಅನುಬಂಧದಲ್ಲಿ** ಒದಗಿಸಿದೆ. |
| ಇ | ಈ ಉದ್ದಿಮೆಗಳಲ್ಲಿ ಖಾಸಗಿ ಹಾಗೂ ಸರ್ಕಾರಿ ವಲಯಗಳಲ್ಲಿ ಯಾವ ವಿದ್ಯಾರ್ಹತೆಯ ಉದ್ಯೋಗಗಳಿವೆ ಹಾಗೂ ಯಾವ ರೀತಿಯ ವೇತನ ಶ್ರೇಣಿ ಇದೆ; | ಉದ್ದಿಮೆಗಳ ಅವಶ್ಯಕತೆಗನುಗುಣವಾಗಿ ವಿದ್ಯಾರ್ಹತೆಗಳನ್ನು ಘಟಕಗಳು ನಿಗದಿಪಡಿಸಿಕೊಂಡಿರುತ್ತದೆ. ಈ ಉದ್ದಿಮೆಗಳಲ್ಲಿ ಎಸ್.ಎಸ್.ಎಲ್.ಸಿ ಯಿಂದ ಪದವಿ ಮಟ್ಟದವರೆಗೆ ಮತ್ತು ತಾಂತ್ರಿಕ ಕೋರ್ಸ್‌ಗಳನ್ನು ಕಲಿತವರಿಗೂ ಉದ್ಯೋಗಾವಕಾಶ ಒದಗಿಸಲಾಗುವುದು. ಕಾರ್ಮಿಕರ ಕಾಯ್ದೆಗೆ ಅನುಗುಣವಾಗಿ ವೇತನ ಶ್ರೇಣಿ ನಿಗದಿಪಡಿಸಲಾಗುತ್ತದೆ. |
| ಈ | ಕಾರ್ಮಿಕರ ಆರೋಗ್ಯ ಹಾಗೂ ಕಲ್ಯಾಣ ಕಾರ್ಯಕ್ರಮಗಳು ಯಾವ ರೀತಿ ಇವೆ; ಉದ್ದಿಮೆ ಹಾಗೂ ನೌಕರರ ನಡುವೆ ಸೌಹಾರ್ದತೆ ಹಾಗೂ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ಯಾವ ರೀತಿಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ; | ಕಾರ್ಖಾನೆಗಳ ಕಾಯ್ದೆ 1948ರಡಿ ಕಾರ್ಮಿಕರಿಗೆ ಲಭ್ಯವಾಗುವ ಆರೋಗ್ಯ ಹಾಗೂ ಕಲ್ಯಾಣ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಲು ಕಾರ್ಖಾನೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಕಾರ್ಮಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. |

ಸಿಐ 344 ಎಸ್‌ಪಿಐ 2021

(ಮುರುಗೇಶ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು